


# ಯುವಭಾರತದಲ್ಲಿ ಚಿನ್ನದಚುಕ್ಕಿ

ದೊಮ್ಮರಾಜು ಗುಕೇಶ್. ಚೆನ್ನೈನ ತೆಲುಗು ಭಾಷಿಕ ಕುಟುಂಬದ ತರುಣ. ವಯಸ್ಸು ಹದಿನೆಂಟು. ಚೆಸ್ ವಿಶ್ವದ ಹೊಸ ಚಾಂಪಿಯನ್! ವಿಶ್ವದ ಅತ್ಯಂತ ಕಿರಿಯ ಚೆಸ್ ಚಾಂಪಿಯನ್. ಐದು ಬಾರಿಯ ವಿಶ್ವ ಚಾಂಪಿಯನ್ ವಿಶ್ವನಾಥನ್ ಆನಂದ್ ನಂತರ ಚೆಸ್ ಜಗತ್ತಿನ ಅತ್ಯುನ್ನತ ಸ್ಥಾನ ಅಲಂಕರಿಸಿದ ಭಾರತೀಯ ಎನ್ನುವ ಅಗ್ಗಳಿಕೆ. ‘ಕ್ಯಾಂಡಿಡೇಟ್ಸ್ ಟೂರ್ನಿ’ಯಲ್ಲಿ ಪ್ರಶಸ್ತಿ, ಚೆಸ್ ಒಲಿಂಪಿಯಾಡ್‌ನಲ್ಲಿ ವೈಯಕ್ತಿಕ ಚಿನ್ನ, ಇದೀಗ ವಿಶ್ವ ಚಾಂಪಿಯನ್ – ಗುಕೇಶ್ ಪಾಲಿಗೆ 2024 ಅವಿಸ್ಮರಣೀಯ.

ಡಿಸೆಂಬರ್ 12. ಸಿಂಗಪುರ. ಫಿಡೆ ವಿಶ್ವ ಚೆಸ್ ಚಾಂಪಿಯನ್ ಪಂದ್ಯಾವಳಿಯ ಕೊನೆಯ ದಿನ. ಬಿಳಿಯ ಕಾಯಿಗಳನ್ನು ನಡೆಸುತ್ತಿದ್ದ ಚೀನಾದ ಡಿಂಗ್ ಲಿರೆನ್ ಅವರ ವಿರುದ್ಧ ಗುಕೇಶ್‌ಗೆ ಫೇವರೆಟ್ ಪಟ್ಟವೇನೂ ಇರಲಿಲ್ಲ. ಹನ್ನೊಂದನೇ ಪಂದ್ಯದಲ್ಲಿ ಲಿರೆನ್ ವಿರುದ್ಧ ಗೆದ್ದು ಮುನ್ನಡೆ ಪಡೆದು ಬೀಗಿದ್ದರು. ವಿಶ್ವ ಚಾಂಪಿಯನ್ ಪಟ್ಟಕ್ಕೆ ಇನ್ನೊಂದೇ ಗೇಣು ಎನ್ನುವಾಗ್ಗೆ, ಹನ್ನೆರಡನೇ ಪಂದ್ಯದಲ್ಲಿ ಲಿರೆನ್ ಪುಟಿದೆದ್ದು ಗುಕೇಶ್‌ಗೆ ಸೋಲುಣಿಸಿದ್ದರು. ಕೈಗೆ ಬಂದ ತುತ್ತು ಬಾಯಿ ತಪ್ಪಿದಂತೆ ಗುಕೇಶ್ ಕಣ್ತುಂಬಿಕೊಂಡಿದ್ದರು. ಹದಿಮೂರನೇ ಪಂದ್ಯ ಮತ್ತೆ ಡ್ರಾ. ಹದಿನಾಲ್ಕನೇ ಹಾಗೂ ನಿರ್ಣಾಯಕ ಕೊನೆಯ ಪಂದ್ಯ ಕೂಡ ಡ್ರಾದಲ್ಲಿ ಕೊನೆಗೊಳ್ಳುತ್ತದೆಂದು ಭಾವಿಸಿದ್ದವರೇ ಹೆಚ್ಚು. ಕಳೆದ ಚಾಂಪಿಯನ್‌ಷಿಪ್‌ನಲ್ಲಿ ಇಂತಹುದೇ ಫಲಿತಾಂಶ ಘಟಿಸಿ, ಟೈಬ್ರೇಕರ್‌ನಲ್ಲಿ ಡಿಂಗ್ ಲಿರೆನ್ ಗೆಲುವು ಸಾಧಿಸಿದ್ದರು. ಇತಿಹಾಸ ಪುನರಾವರ್ತನೆಯಾಗುವ ಎಲ್ಲ ಲಕ್ಷಣಗಳೂ ಇದ್ದವು. ವಿಶ್ವ ಚಾಂಪಿಯನ್ ಪಟ್ಟಕ್ಕೆ ಗುಕೇಶ್ ಫೇವರೆಟ್ ಆಗಿ ಉಳಿದಿಲ್ಲ ಎಂದು ಮ್ಯಾಗ್ನಸ್ ಕಾರ್ಲ್‌ಸನ್ ಹೇಳಿದ್ದರು.

ಹದಿನಾಲ್ಕನೇ ಸುತ್ತಿನ ಪಂದ್ಯದಲ್ಲೂ ಉಭಯತ್ರರೂ ಸಮಬಲ ಸಾಧಿಸಿ, ಪಂದ್ಯ ಡ್ರಾದಲ್ಲಿ ಕೊನೆಗೊಳ್ಳುತ್ತದೆಂದು ತಜ್ಞರು ಷರಾ ಬರೆದರು. ಗುಕೇಶ್ ಎಲ್ಲರ ಲೆಕ್ಕಾಚಾರ ಬುಡಮೇಲು ಮಾಡಿದರು; ಅನನುಭವದ ಅಡೆತಡೆ ದಾಟಿ ಗುರಿ ಮುಟ್ಟಿದರು. ಲಿರೆನ್ ಕೈಚೆಲ್ಲಿದಾಗ ಗುಕೇಶ್ ಕಣ್ಣುಗಳು ಮತ್ತೆ ತುಂಬಿ ಬಂದಿದ್ದವು. ಆ ಕ್ಷಣ ವಿಶ್ವದ ಕೋಟ್ಯಂತರ ಚದುರಂಗದ ಪ್ರೇಮಿಗಳ ಹೃದಯಗಳೂ ತುಂಬಿಬಂದಿದ್ದವು. ಹನ್ನೊಂದು ವರ್ಷದ ಹುಡುಗನಾಗಿದ್ದಾಗ ನೀಡಿದ್ದ ಸಂದರ್ಶನವೊಂದರಲ್ಲಿ, ‘ಅತ್ಯಂತ ಕಿರಿಯ ವಿಶ್ವ ಚೆಸ್ ಚಾಂಪಿಯನ್ ಆಗುವುದು ನನ್ನ ಗುರಿ’ ಎಂದು ಗುಕೇಶ್ ಹೇಳಿದ್ದರು. ಏಳು ವರ್ಷಗಳ ನಂತರ ಆ ಮಾತೀಗ ನಿಜವಾಗಿದೆ.

‘ನನ್ನ ಪಾಲಿಗಿದು ಈ ವರ್ಷದ ಅತ್ಯುತ್ತಮ ಪ್ರದರ್ಶನದ ಟೂರ್ನಿ. ಫಲಿತಾಂಶದ ಬಗ್ಗೆ ನನಗೆ ಬೇಸರವೇನೂ ಇಲ್ಲ’ ಎನ್ನುವ ಡಿಂಗ್ ಲಿರೆನ್‌ರ ಪ್ರತಿಕ್ರಿಯೆ, ವಿಶ್ವ ಚೆಸ್ ಚಾಂಪಿಯನ್‌ಷಿಪ್ ಪಂದ್ಯಾವಳಿಯಲ್ಲಿದ್ದ ತೀವ್ರ ಪೈಪೋಟಿಯನ್ನು ಸೂಚಿಸುವುದರ ಜೊತೆಗೆ, ಗುಕೇಶ್‌ರ ಪ್ರತಿಭೆಗೆ ಸಂದ ಗೌರವದಂತಿತ್ತು.

ಗುಕೇಶ್ ಗೆಲುವು ವೈಯಕ್ತಿಕ ಸಾಧನೆಯಷ್ಟೇ ಅಲ್ಲ. ಅದು ಭಾರತದ ಯುವಶಕ್ತಿಯ ಅಸಾಧಾರಣ ಸಾಮರ್ಥ್ಯದ ಸಂಕೇತವೂ ಹೌದು. ಕ್ರಿಕೆಟ್ ಹುಚ್ಚಿನಹೊಳೆಯ ನಡುವೆಯೂ ವಿಶ್ವ ಚದುರಂಗದ ನಕಾಶೆಯಲ್ಲಿ ಭಾರತದ ಜಾಣ ಜಾಣೆಯರು ತಮ್ಮ ಛಾಪು ಮೂಡಿಸುತ್ತಿರುವ ಸಂದರ್ಭದಲ್ಲಿ ಗುಕೇಶ್‌ರ ಅಪ್ರತಿಮ ಸಾಧನೆ ಎಳೆಯ ತಲೆಮಾರಿಗೆ ಹೊಸ ಕನಸನ್ನು ಕರುಣಿಸುವಂತಿದೆ.

2024 – ವರ್ಷದ ಕೊನೆಯಲ್ಲಿ ಭಾರತಕ್ಕೆ ಸ್ಫೂರ್ತಿಪತಾಕೆಯ ರೂಪದಲ್ಲಿ, ಚಿನ್ನದಚುಕ್ಕಿಯ ರೂಪದಲ್ಲಿ ಗುಕೇಶ್ ಒದಗಿಬಂದಿದ್ದಾರೆ.

## ಚುಟುಕು ಕ್ರಿಕೆಟ್‌ನಲ್ಲಿ ಮಿನುಗು ಮಿಂಚು

ಜೂನ್ 1ರಿಂದ 29ರವರೆಗೆ ನಡೆದ ‘ಟ್ವೆಂಟಿ 20 ವಿಶ್ವಕಪ್ ಕ್ರಿಕೆಟ್’ ಪಂದ್ಯಾವಳಿಯಲ್ಲಿ ರೋಹಿತ್ ಶರ್ಮ ನಾಯಕತ್ವದ ಭಾರತ ತಂಡ ದಕ್ಷಿಣ ಆಫ್ರಿಕಾದ ವಿರುದ್ಧ ಜಯಗಳಿಸುವ ಮೂಲಕ ಚಾಂಪಿಯನ್ಸ್ ಆಗಿ ಹೊರಹೊಮ್ಮಿತು. ವೆಸ್ಟ್ ಇಂಡೀಸ್ ಹಾಗೂ ಅಮೆರಿಕ ಈ ಕ್ರೀಡಾಕೂಟದ ಆತಿಥ್ಯ ವಹಿಸಿದ್ದವು.